**ದಿಃ 24.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟೀಸವಾಲು : ಪ್ರತಿವಾದಿ ಪರ ಶ್ರೀ ಪಿ.ಬಿ.ಎಸ್. ವಕೀಲರಿಂದ

ನಿಡಿ-5ರಂತೆ ನೋಟೀಸನ್ನು ಶಿವಾನಂದ ಭಟ್ ನರಹರಿ ಭಟ್ ಎಂ ಮತ್ತು ಗೌತಮ್ ಭಟ್ ಪಿ ರವರು ತಮ್ಮ ವಕೀಲರಾದ ಅಶ್ವಥ್ ಎನ್ ರವರ ಮೂಲಕ ಕೊಟ್ಟಿದ್ದರು ಎಂದರೆ ಸರಿ. ಸದರಿ ನೋಟೀಸಿಗೆ ನಾನು ಉತ್ತರ ಕೊಟ್ಟಿದ್ದೇನು ಎಂದರೆ ಸರಿ. ಈ ನಿಡಿ-5 ನೋಟೀಸು ಅಸಲು ದಾವೆ ಸಂಖ್ಯೆಃ 06/2017 ಸಲ್ಲಿಸುವ ಮೊದಲು ಕಳುಹಿಸಿದ್ದು ಎಂದರೆ ಸರಿ. ಅಸಲು ದಾವೆ ಸಂಖ್ಯೆಃ 06/2017 ವಿದ್ ಡ್ರಾ ಮಾಡುವ ಸಂದರ್ಭದಲ್ಲಿ ಆರ್ಬಿಟ್ರೇಶನ್ ಪ್ರೊಸೀಡಿಂಗ್ಸ್ ಮೂಲಕ ಇಷ್ಟರ ವರೆಗೆ ದಾಖಲು ಮಾಡಿಲ್ಲ ಎಂದರೆ ಸರಿ. ಅಸಲು ದಾವೆ ಸಂಖ್ಯೆಃ 06/2017 ಯಾವ ಕಾರಣಕ್ಕಾಗಿ ವಿತ್ ಡ್ರಾ ಮಾಡಲಾಗಿದೆ ಎಂದರೆ ಸಾಕ್ಷಿ ನಮ್ಮ ಸಂಸ್ಥೆಯ ಆಡಿಟರ್ ನಮ್ಮೊಳಗೆ ಮಾತನಾಡಿಕೊಂಡು ಒಪ್ಪಂದ ಮಾಡಿಕೊಳ್ಳೋಣ ಎಂದು ತಿಳಿಸಿದ್ದರಿಂದ ವಿತ್ ಡ್ರಾ ಮಾಡಿಕೊಳ್ಳಲಾಯಿತು. ಸದರಿ ಆಡೀಟರ್ ಮಂಗಳೂರಿನ ರಾಘವೇಂದ್ರ ರಾವ್ ಎಂಡ್ ಕಂಪನಿ.

2. ಅಸಲು ದಾವೆ ಸಂಖ್ಯೆಃ 06/2017 ರ ಪ್ರತಿವಾದಿಗಳು ಮೆ ಶ್ರೀ ಲಕ್ಷ್ಮೀ ವೆಂಕಟೇಶ ಸ್ವರ್ಣಾಭರಣ ಫರ್ಮ್ ಗೆ ಸಂಬಂಧಿಸಿದಂತೆ 2020-2021ರ ಆಡಿಟರ್ ಬ್ಯಾಲೆನ್ಸ್ ಶೀಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು ಎಂದರೆ ಇರಬಹುದು, ಆದರೆ ಅ ಬಗ್ಗೆ ನನಗೆ ಅದರ ಪ್ರತಿ ನೀಡಿಲ್ಲ. 2020-2021ರ ಆಡಿಟರ್ ಬ್ಯಾಲೆನ್ಸ್ ಶೀಟ್ ನಲ್ಲಿ ಶಿವಾನಂದ ಭಟ್ ರವರಿಗೆ ಬಾಡಿಗೆಯನ್ನು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

3. ದಿ 03.03.2022ರಂದು ರಾಘವೇಂದ್ರ ರಾವ್ ಅಂಡ್ ಕಂಪನಿಯವರಿಗೆ ನೋಂದಾಯಿತ ಪತ್ರದ ಮೂಲಕ ಮೆ ಶ್ರೀ ಲಕ್ಷ್ಮೀ ವೆಂಕಟೇಶ ಸ್ವರ್ಣಾಭರಣ ಫರ್ಮ್ ಗೆ ಸಂಬಂಧಿಸಿದಂತೆ ಬ್ಯಾಲೆನ್ಸ್ ಶೀಟ್ ಕೊಡಬೇಕೆಂದು ಪತ್ರ ಬರೆದಿದ್ದರು ಎಂದರೆ ಸರಿ. ಅದರಂತೆ 2015 ರಿಂದ 2021ರನ್ನು ಬ್ಯಾಲೆನ್ಸ್ ಶೀಟನ್ನು ಕೊಟ್ಟಿರುತ್ತಾರೆ ಎಂದರೆ 2016 ರಿಂದ 2021-2021ರ ವರೆಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಬ್ಯಾಲೆನ್ಸ್ ಶೀಟ್ ನಲ್ಲಿ ಶಿವಾನಂದ ಭಟ್ ರಿಗೆ ಕೊಟ್ಟ ಬಗ್ಗೆ ನಮೂದು ಮಾಡಿದ್ದಾರೆ ಎಂದರೆ ರೆಂಟ್ ಕೊಟ್ಟ ಬಗ್ಗೆ ನಮೂದು ಇರುತ್ತದೆ ಆದರೆ ಅದನ್ನು ನನಗೆ ಕೊಟ್ಟಿದ್ದಾರೋ ಶಿವಾನಂದ ಭಟ್ ರವರಿಗೆ ಕೊಟ್ಟಿದ್ದಾರೋ ಎಂಬ ಬಗ್ಗೆ ನಮೂದು ಇಲ್ಲ ಎನ್ನುತ್ತಾರೆ.

4. ದಿ. 25.10.2021 ಕ್ಕೂ ಮೊದಲು ಸಹ ರಾಘವೇಂದ್ರ ರಾವ್ ಅಂಡ್ ಕಂಪನಿಯವರಲ್ಲಿ 2015 ರಿಂದ 2021ರನ್ನು ಬ್ಯಾಲೆನ್ಸ್ ಶೀಟನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 2016ರಿಂದ 2021ರ

ವರೆಗೆ ಮಾತ್ರ ಕೊಟ್ಟಿದ್ದರು ಎನ್ನುತ್ತಾರೆ. ದಿನಾಂಕ 03.11.2021ರಂದು 2021-2022ರ ಬ್ಯಾಲೆನ್ಸ್ ಶೀಟನ್ನು ಕೋರಿಯರ್ ಮೂಲಕ ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

5. ಚಿನ್ನಾಭರಣದ ಫರ್ಮ್ ಗೆ ಸಂಬಂಧಿಸಿದ ಬಾಡಿಗೆಯನ್ನು ಶಿವಾನಂದ ಭಟ್ ರವರಿಗೆ ಕೊಟ್ಟ ಬಗ್ಗೆ ಸಾಧನೆ ಇದೆ ಎಂದರೆ ಸಾಕ್ಷಿ ಶಿವಾನಂದ ಭಟ್ ರವರಿಗೆ ಕೊಟ್ಟರೆ ನನಗೆ ಕೊಟ್ಟಂತೆ ಆಗುವುದಿಲ್ಲ ಎನ್ನುತ್ತಾರೆ. ನಾನು ಶಿವಾನಂದ ಭಟ್ ರ ಬಳಿ ಇಷ್ಟರ ತನಕ ಚಿನ್ನಾಭರಣದ ಫರ್ಮ್ ನವರು ಬಾಡಿಗೆ ಹಣ ಕೊಟ್ಟ ಬಗ್ಗೆ ಇನ್ನೂ ನಾನು ಕೇಳಿದ್ದುಂಟಾ ಎಂದರೆ ಶಿವಾನಂದರಲ್ಲಿ ಕೇಳಿಲ್ಲ, ಆದರೆ  ಮೂರೂ ಜನ ಪಾಲುದಾರರಲ್ಲಿ ಕೊನೆಯ ಬಾರಿಗೆ 2021ರಲ್ಲಿ ಕೇಳಿರುತ್ತೇನೆ.

6. ಬಾಡಿಗೆ ಹಣವನ್ನು ಶಿವಾನಂದ ಭಟ್ ರವರಿಗೆ ಕೊಟ್ಟ ಕಾರಣ ಪ್ರತಿವಾದಿ ಸಂಸ್ಥೆಯ ಮೇಲೆ ಕೇಸು ಮಾಡಲು ನನಗೆ ಅಧಿಕಾರ ಇಲ್ಲ, ಆದರೆ ಶಿವಾನಂದ ಭಟ್ ರವರಿಂದ ಹಣ ವಸೂಲು ಮಾಡಬೇಕು ಎಂದರೆ ಸಾಕ್ಷಿ ನಾನು ಬಾಡಿಗೆ ಕೊಟ್ಟದ್ದು ಪ್ರತಿವಾದಿಗಳಿಗೆ ಶಿವಾನಂದ ಭಟ್ ರವರಿಗಲ್ಲ ಎನ್ನುತ್ತಾರೆ. ಶಿವಾನಂದ ಭಟ್ ರವರು ಅಗತ್ಯ ಪಕ್ಷಗಾರರು ಎಂದರೆ ಆ ಬಗ್ಗೆ ನನಗೆ ಗೊತ್ತಾಗುವುದಿಲ್ಲ.

7. ಪೊಲೀಸರಿಗೆ ದೂರನ್ನು ಮೆ ಶ್ರೀ ಲಕ್ಷ್ಮೀ ವೆಂಕಟೇಶ ಸ್ವರ್ಣಾಭರಣ ಸಂಸ್ಥೆಯ ಮೂರು ಜನ ಪಾಲುದಾರರ ಮೇಲೆ 2023ರಲ್ಲಿ ಕೊಟ್ಟಿದ್ದೆ. ಆ ಪ್ರಯುಕ್ತ ಮೂವರು ಪೊಲೀಸ್ ಠಾಣೆಗೆ ಬಂದು ಹೇಳಿಕೆ ಕೊಟ್ಟಿದ್ದಾರೆ ಎಂದರೆ ಇರಬಹುದು. ಪೊಲೀಸ್ ಠಾಣೆಯಲ್ಲಿ ನಾನು ಮೆ ಶ್ರೀ ಲಕ್ಷ್ಮೀ ವೆಂಕಟೇಶ ಸ್ವರ್ಣಾಭರಣ ಸಂಸ್ಥೆಗೆ ಸಂಬಂಧಿಸಿದಂತೆ ಆಡಿಟರ್  ಬ್ಯಾಲೆನ್ಸ್ ಶೀಟನ್ನು  ನೋಡಿಲ್ಲ. ಪೊಲೀಸ್ ಠಾಣೆಯಲ್ಲಿ ಮೂವರು ಪಾಲುದಾರರು ನೀಡಿದ ಹೇಳಿಕೆ ಮತ್ತು ದಾಖಲೆಯನ್ನು ನಾನು ಪಡೆದಿಲ್ಲ. ನಾನು ಬಂಟ್ವಾಳ ನಗರ ಪೊಲೀಸ್  ಠಾಣೆಗೆ ದೂರು ಕೊಟ್ಟಿದ್ದು ಠಾಣೆಯಲ್ಲಿ ಮುಕ್ತಾಯಗೊಂಡು ಕ್ರಿಮಿನಲ್ ಪ್ರಕರಣ ಆಗಿರುತ್ತದೆ. ನಾನು ಕ್ರಿಮಿನಲ್ ಪ್ರಕರಣವನ್ನು ನವಂಬರ್ 2023ರಲ್ಲಿ  ಬಂಟ್ವಾಳದ ಅಪರ ಸಿವಿಲ್ ಮತ್ತು  ಎಂ ಎಫ್ ಸಿ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತೇನೆ.

8. ಸಂಸ್ಥೆಯ ಇತರ ಪಾಲುದಾರರನ್ನು ಸತಾಯಿಸಬೇಕು ಉಪದ್ರವ ಕೊಡಬೇಕು  ಎಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ , ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವ್ಯಾಜ್ಯದಲ್ಲಿ ನಾನು ಕೇಳಿದ ಮೊತ್ತಕ್ಕಾಗಲೀ ಬಡ್ಡಿಗಾಗಲೀ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಪಾಲುದಾರಿಕೆ ಸಂಸ್ಥೆಗೆ ಸೇರಿದ ಪ್ರಕರಣವಾದ ಕಾರಣ ಈ

ನ್ಯಾಯಾಲಯದಲ್ಲಿ ಈ ದಾವೆಯನ್ನು ಸಲ್ಲಿಸಲು ಅಧಿಕಾರ ಇಲ್ಲ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ, ಅದು ನ್ಯಾಯಾಲಯಕ್ಕೆ ಬಿಟ್ಟದ್ದು ಎನ್ನುತ್ತಾರೆ.

9. 31.03.2022ರಿಂದ ಸದರಿ ಪ್ರತಿವಾದಿ ಸಂಸ್ಥೆ ಮಾಡುವ ವ್ಯಾಪಾರ ನಿಂತಿದೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನಾನು ಈ ವ್ಯಾಜ್ಯದಲ್ಲಿ ಕೇಳಿದಂತಹ ಪರಿಹಾರ ಕಾಲ ಬಾಧಿತವಾಗಿದ್ದು, ನಾನು ಯಾವುದೇ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇದೆ.**

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**
**ಬಂಟ್ವಾಳ.**